# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:
## ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ:ಕರಾಸಾ/ಕೇಕ/ಸಂಚಾರ/ಕಾ/ಬಿಸಿಡಿ-31/ 3045 /15-16 ದಿನಾಂಕ: 06/08/2015.

## ಸುತ್ತೋಲೆ ಸಂಖ್ಯೆ : 1302

**ವಿಷಯ:** ಐರಾವತ ಮತ್ತು ಮಲ್ಟಿ ಆಕ್ಸಲ್ ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರಿಗೆ ವಿಶೇಷ ಭತ್ಯೆ ನೀಡುವ ಬಗ್ಗೆ.

**ಉಲ್ಲೇಖ:** 1. ಸುತ್ತೋಲೆ-1094, ದಿನಾಂಕ: 08/08/2011.
2. ಸುತ್ತೋಲೆ-1111, ದಿನಾಂಕ: 06/03/2012.

*********

ಅಪಘಾತರಹಿತ(ಭಾರಿ, ಲಘು, ಮಧ್ಯಮ) ಚಾಲನೆ ಮಾಡಿದ ಹಾಗೂ ನಿಗದಿತ ಕೆ.ಎಂ.ಪಿ.ಎಲ್. ಗುರಿಯನ್ನು ಸಾಧಿಸಿದ ವೋಲ್ವೋ ಚಾಲಕರಿಗೆ ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿದಂತೆ ನೀಡುತ್ತಿರುವ ವಿಶೇಷ ಭತ್ಯೆಗಳನ್ನು ದಿನಾಂಕ: 01/09/2015ರಿಂದ ಜಾರಿಗೆ ಬರುವಂತೆ ಮಾರ್ಪಾಟುಗೊಳಿಸಿ, ಐರಾವತ ಮತ್ತು ಮಲ್ಟಿ ಆಕ್ಸಲ್ ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕ/ಚಾಲಕ-ಕಂ-ನಿರ್ವಾಹಕರಿಗೆ ಈ ಕೆಳಕಂಡಂತೆ ವಿಶೇಷ ಭತ್ಯೆಯನ್ನು ನೀಡಲು ತೀರ್ಮಾನಿಸಲಾಗಿದೆ.

1. ಯಾವುದೇ ಒಂದು ತಿಂಗಳಿನಲ್ಲಿ ನಿಗದಿತ ಕೆ.ಎಂ.ಪಿ.ಎಲ್. ಗುರಿಯನ್ನು ಮಾತ್ರ ಸಾಧಿಸಿದ ಐರಾವತ ಮತ್ತು ಮಲ್ಟಿ ಆಕ್ಸಲ್ ಸಾರಿಗೆಗಳ ಚಾಲಕ/ಚಾಲಕ-ಕಂ-ನಿರ್ವಾಹಕರು ಮುಂದಿನ ತಿಂಗಳಿನಲ್ಲಿ ರೂ **150/-** ವಿಶೇಷ ಭತ್ಯೆಗೆ ಮಾತ್ರ ಅರ್ಹರಾಗುವರು.
2. ಆಯಾ ತಿಂಗಳಿನಲ್ಲಿ ಅಪಘಾತರಹಿತ(ಭಾರಿ, ಲಘು, ಮಧ್ಯಮ) ಚಾಲನೆ ಮಾಡುವುದರ ಜೊತೆಗೆ ನಿಗದಿತ ಕೆ.ಎಂ.ಪಿ.ಎಲ್. ಗುರಿಯನ್ನು ಸಾಧಿಸಿದರೆ ಮಾತ್ರ ಐರಾವತ ಮತ್ತು ಮಲ್ಟಿ ಆಕ್ಸಲ್ ಸಾರಿಗೆಗಳ ಚಾಲಕ/ಚಾಲಕ-ಕಂ-ನಿರ್ವಾಹಕರು ಮುಂದಿನ ತಿಂಗಳಿನಲ್ಲಿ ರೂ **250/-** ವಿಶೇಷ ಭತ್ಯೆಗೆ ಅರ್ಹರಾಗುವರು.

ಪ್ರತಿ ತಿಂಗಳು ಕನಿಷ್ಠ 22 ದಿನಗಳು ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಮಾತ್ರ ಮೇಲಿನ ವಿಶೇಷ ಭತ್ಯೆಗಳಿಗೆ ಅರ್ಹರಾಗಿರುತ್ತಾರೆ. ಈ ವಿಶೇಷ ಭತ್ಯೆಯನ್ನು ಪ್ರತಿ ತಿಂಗಳ ಸಂಬಳದಲ್ಲಿ ಸೇರಿಸಿ ಪಾವತಿಸುವುದು. ಒಂದು ವೇಳೆ ಸಾರ್ವಜನಿಕ ಪ್ರಯಾಣಿಕರಿಂದ ದೂರು ಬಂದಲ್ಲಿ ಆ ತಿಂಗಳ ವಿಶೇಷ ಭತ್ಯೆ ನೀಡಲಾಗುವುದಿಲ್ಲ.

**ಸುತ್ತೋಲೆಯ ಸೂಚನೆಗಳು ದಿನಾಂಕ: 01/09/2015ರಿಂದ ಜಾರಿಗೆ ಬರುತ್ತವೆ ಹಾಗೂ ಉಲ್ಲೇಖದಲ್ಲಿ ಪ್ರಸ್ತಾಪಿಸಿರುವ ಎರಡೂ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.** ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು :

ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಕರಾರಸಾ ನಿಗಮ, ಕೇಂದ್ರ ಕಛೇರಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಹಿರಿಯ/ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ ನಿರ್ದೇಶಕರು(ಸಿ:ಪ), ಕರಾರಸಾ ನಿಗಮ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.